## ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ , ರಾಣೇಬೆನ್ನೂರು.

## ಸಿ . ಸಿ. ನಂಬರಃ 662/2019

| | | | |
|---|---|---|---|
| ಸಾಕ್ಷಿದಾರರ ಹೆಸರು | – | ಪ್ರಭಕರ ಪರಂಗಿ | ಫ್ರಾ.ಸಾ– 3 |
| ತಂದೆಯ ಹೆಸರು | – | ಕಲ್ಲೇಶಪ್ಪ | ಚಾ.ಸಾ– 4 |
| ವಯಸ್ಸು | – | 52 ವರ್ಷ | |
| ಉದ್ಯೋಗ | – | ಸಹ ಶಿಕ್ಷಕರು , ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕೆರೆಮಲ್ಲಾಪುರ | |
| ವಾಸ | – | ರಾಣೇಬೆನ್ನೂರು | |

ದಿನಾಂಕಃ17–02–2021 ರಂದು ಸಾಕ್ಷಿದಾರರನ್ನು ಕರೆಯಿಸಿ Thermal Test ಮೂಲಕ ಪರೀಕ್ಷಿಸಿದಾಗ ಕೋವಿಡ್ –19 ರ ಯಾವುದೇ ಲಕ್ಷಣಗಳು ಕಂಡುಬಂದಿರುವುದಿಲ್ಲ ಆ ಕಾರಣದಿಂದ ಸಾಕ್ಷಿದಾರರನ್ನು ಪ್ರಮಾಣೀಕರಿಸಲಾಯಿತು.

### ಮುಖ್ಯ ವಿಚಾರಣೆ ಎಪಿಪಿ ಅವರಿಂದಃ

ನಾನು ಸನ್ 2006 ರಿಂದ ಇವತ್ತಿನವರಗೆ ಕೆರೆಮಲ್ಲಾಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕೆಲಸ ಮಾಡುತ್ತಾ ಇದ್ದೇನೆ.

ನಾನು ದಿನನಿತ್ಯ ಶಾಲೆಗೆ ರಾಣೆಬೇನ್ನೂರಿನಿಂದ ಕೆರೆ ಮಲ್ಲಾಪುರಕ್ಕೆ ಹೋಗುವುದು ಬರುವುದು ಮಾಡುತ್ತೇನೆ . ದಿಃ 11–08–2018 ರಂದು ಶನಿವಾರ ಇದ್ದಕಾರಣ ನಮ್ಮ ಶಾಲೆ 8.00 ರಿಂದ 11.30 ರವರಗೆ ಮಾತ್ರ ಇತ್ತು. ಆ ದಿನ ಶಾಲೆ ಮುಗಿದ ನಂತರ ನಾವೆಲ್ಲ ಕೋಣೆಗೆ ಕೀಲಿ ಹಾಕಿಕೊಂಡು ಮನೆಗೆ ಹೋಗುಗಿರುತ್ತೇವೆ . ಮಾರನೆ ದಿನ ದಿಃ 12–08–2018 ಇದ್ದ ಕಾರಣ ನಾವು ಶಾಲೆಗೆ ಬಂದಿರುವುದಿಲ್ಲ. ದಿಃ 13–08–2018 ರಂದು ಸೋಮವಾರ ಬೆಳಿಗ್ಗೆ 9.00 ಗಂಟೆಗೆ ನಾನು ಮತ್ತು ನಮ್ಮ ಉಳಿದ ಸಹ ಶಿಕ್ಷಕರು ಮತ್ತು ಸಿಬ್ಬಂದಿಗಳು ಹಾಗುಸ ಮುಖ್ಯೋಪಾಧ್ಯಯರು ಶಾಲೆಗೆ ಬಂದು ಅಕ್ಷರ ದಾಸೋಹದ ಅಡುಗೆ ಕೋಣೆಯ ಬಾಗಿಲಿದ ಕೀಲಿಯನ್ನು ಒಡೆದು ಕಿಡಿಕಿಯ ಮೇಲೆ ಇತ್ತು ಬಾಗಿಲು ತೆಗೆದಿತ್ತು . ನಾವು ಒಳಗಡೆ ಹೋಗಿ ನೋಡಿದಾಗ ಅಡುಗೆ ಕೋಣೆಯಲ್ಲಿದ್ದ 2 ತುಂಬಿದ ಸಿಲಿಂಡರ್ ಮತ್ತು 1 ಖಾಲಿ ಸಿಲಿಂಡರ್ ಕಳ್ಳತನವಾಗಿದ್ದವು. ತದಾದನಂತರ ನಾವು ಎಸ್ .ಡಿ.ಎಂ.ಸಿ ಅಧ್ಯಕ್ಷರಿಗೆ ಮತ್ತು ಸದಸ್ಯರಿಗೆ ಪೋನ್ ಮುಖಾಂತರ ಕಳ್ಳತನವಾದ ವಿಷಯವನ್ನು ತಿಳಿಸಿರುತ್ತೇವೆ. ಅದೇ ರೀತಿ ನಮ್ಮ ಮೇಲಾಧಿಕಾರಿಗಳಿಗೂ ಕೂಡಾ ಈ ವಿಷಯವನ್ನು ತಿಳಿಸಸಿರುತ್ತೇವೆ. ಅವರ ಆದೇಶದಂತೆ ನಮ್ಮ ಮುಖ್ಯೋಪಾಧ್ಯಾಯರು ರಾಣೆಬೆನ್ನೂರ ಗ್ರಾಮಾಂತರ ಪೊಲೀಸ ಠಾಣೆಗೆ ಹೋಗಿ ಸದರಿ ಘಟನೆ ಕುರಿತು ದೂರನ್ನು ಕೊಟ್ಟಿರುತ್ತಾರೆ . ನಾನು ಪೋಲಿಸರ ಮುಂದೆ ಸದರಿ ಘಟನೆ ವಿಚಾರದಲ್ಲಿ ಹೇಳಿಕೆಯನ್ನು

ಕೊಟ್ಟಿರುತ್ತೇನೆ. ಈಗ ನೋಡುತ್ತಿರುವ ನಿಪಿ-3 ರಿಂದ 5 ಫೋಟೋದಲ್ಲಿರುವ ಸ್ಥಳ ನಮ್ಮ ಅಕ್ಷರ ದಾಸೋಹ ಅಡುಗೆ ಕೋಣೆಯಾಗಿರುತ್ತದೆ .

ಸುಮಾರು 5 ತಿಂಗಳ ನಂತರ ಪೋಲಿಸರು ನಮ್ಮ ಸಿಲಿಂಡರ್ ಗಳು ಸಿಕ್ಕಿರುತ್ತವೆ ಎಂದು ನಮಗೆ ತಿಳಿಸಿರುತ್ತಾರೆ. ಅದಲ್ಲದೇ ಪೋಲಿಸರು ಕಳ್ಳತನ ಮಾಡಿದ ಆರೋಪಿತರನ್ನು ನಮ್ಮ ಶಾಲೆಗೆ ಕರೆದುಕೊಂಡು ಬಂದಿರುತ್ತಾರೆ. ನಾನು ಅವರನ್ನು ನೋಡಿದರೆ ಗುರುತಿಸಬಲ್ಲೆ. ( ಆರೋಪಿತರು ಈ ದಿನ ಗೈರು ಹಾಜರು ಇದ್ದು ಮತ್ತು ಆರೋಪಿ ಪರ ವಕೀಲರು ಅರ್ಜಿ ಸಲ್ಲಿಸಿರುತ್ತಾರೆ ಹಾಗು ಗುತುತಿಸುವಿಕೆ ಬಗ್ಗೆ ಯಾವುದೇ ತಕರಾರು ಇಲ್ಲ ಎಂದುತಿಳಿಸಿರುತ್ತಾರೆ) . ಈಗ ನೋಡುತ್ತಿರುವ ನಿಪಿ-6 ಮತ್ತು 7 ಫೋಟೋದಲ್ಲಿರುವ ಸಿಲಿಂಡರ್ ಗಳು ನಮ್ಮ ಶಾಲೆಯ ಸಿಲಿಂಡರ್ ಗಳು ಆಗಿರುತ್ತವೆ. ಸದರಿ ಆರೋಪಿತರ ಹೆಸರುಗಳ ಹೆಸರುಗಳು ಪಕ್ಕಿರೇಶ , ನಾಗರಾಜ ಮತ್ತು ಉಮೇಶ ಆಗಿರುತ್ತದೆ . ಈಗ ನೋಡುತ್ತಿರುವ ಮು.ಮಾ-1 ಸದರಿ ಕೀಲಿ ಆಗಿರುತ್ತದೆ.

(ಈ ಹಂತದಲ್ಲಿ ಸಾಕ್ಷಿದಾರರನ್ನು ಭಾಗಶಃ ಅಂಶಗಳಿಗೆ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಎಪಿಪಿ ಅವರು ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲುಃ ಎಪಿಪಿ ಅವರಿಂದಃ</u>**

3 ನೇ ಆರೋಪಿ ಹೆಸರು ಉಮೇಶ ಆಗಿರುವುದಿಲ್ಲ ಮಹೇಶ ಆಗಿರುತ್ತದೆ ಎಂದರೆ ನಿಜ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ವಿ.ಸಿ.ಕೆ. ವಕೀಲರಿಂದಃ</u>**

ನಾನು ಸನ್ 2006 ರಿಂದ ಇವತ್ತಿನವರಗೆ ಕೆರೆಮಲ್ಲಾಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕೆಲಸ ಮಾಡುತ್ತಾ ಇದ್ದೇನೆ. ನಾನು ರಾಣೇಬೆನ್ನೂರು ಹಳೇಯ ರೋಟರಿ ಸ್ಕೂಲ್ ಹತ್ತಿರ , ರೈಲ್ವೆ ಸ್ಟೇಶನ್ ರೋಡ್ ಬಳಿ ವಾಸವಾಗಿದ್ದೇನೆ. ನಾನು ದಿಃ 11-08-2018 ಅಥವಾ 12-08-2018 ರಂದು ಶಾಲೆಯಲ್ಲಿ ವಾಸವಾಗಿರುವುದಿಲ್ಲ. ದಿಃ 13-08-2018 ರಂದು ಬೆಳಿಗ್ಗೆ ಶಾಲೆಗೆ ಹೋದ ನಂತರ ನಮಗೆ ವಿಷಯ ಗೊತ್ತಾಗಿರುತತದೆ ಅದಕ್ಕೂ ಮೊದಲು ನಮಗೆ ಕಳ್ಳತನದ ವಿಷಯ ತಿಳಿಸಿರುವುದಿಲ್ಲ. ನಮ್ಮ ಶಾಲೆಯ ಅಡುಗೆ ಕೋಣೆಯ ಬೀಗದ ಕೈ ನಮ್ಮ ಮುಖ್ಯೋಪಾದ್ಯಾಯರ ಬಳಿ ಇರುತ್ತದೆ. ದಿನ ನಿತ್ಯ ನಮ್ಮ ಶಾಲೆಗೆ ಅಡುಗೆ ಕೋಣೆ ಬೀಗವನ್ನು ನಮ್ಮ ಮುಖ್ಯೋಪಾಧ್ಯಾಯರು ತೆಗೆದಿರುತ್ತಾರೆ. ಮು.ಮಾ-1 ಅಡುಗೆ ಕೋಣೆಯ ಬೀಗವಾಗಿರುವುದಿಲ್ಲ ಅದರೆ ಪೋಲಿಸರು ಆರೋಪಿತರ ವಿರುದ್ಧ ಈ ಕೇಸಿನಲ್ಲಿ ಅಳವಡಿಸಿರುತ್ತಾರೆ ಎಂದರೆ ಸರಿಯಲ್ಲ. ಮು.ಮಾ-1 ರಂತ ಬೀಗ ಮಾರ್ಕೇಟ್ ನಲ್ಲಿ ಸಾಮಾನ್ಯವಾಗಿ ಸಿಗುತ್ತವೆ ಎಂದರೆ ನಿಜ . ದಿಃ 11-08-2018 ಮತ್ತು ದಿಃ 12-08-2018 ರಂದು ಇಂತವರೇ ಕಳ್ಳತನ ಮಾಡಿರುತ್ತಾರೆ ಎಂದು ನನಗೆ ನಿಖರವಾಗಿ ಗೊತ್ತಿಲ್ಲ ಎಂದರೆ ನಿಜ. ಪೋಲಿಸರು ಹೇಳಿದ್ದರಿಂದ ನನಗೆ ಆರೋಪಿತರು ಯಾರು ಎಂದು ಗೊತ್ತಾಗಿರುತ್ತದೆ ಎಂದರೆ ನಿಜ. ಪೋಲಿಸ್ ಠಾಣೆಯಲ್ಲಿ

ಅಥವಾ ಶಾಲೆಯಲ್ಲಿ ಈ ಕೇಸಿನ ಸಂಬಂದ ನಾನು ಯಾವುದೇ ಸಹಿ ಮಾಡಿಲ್ಲ. ಈಗ ನೋಡುತ್ತಿರುವ ನಿಪಿ-6 ಮತ್ತು 7 ಪೋಟೋದಲ್ಲಿರುವ ಸಿಲಿಂಡರ್ ಗಳು ಸಾಮಾನ್ಯವಾಗಿ ಮಾರ್ಕೇಟ್ ನಲ್ಲಿ ಲಭ್ಯ ಇರುತ್ತವೆ ಎಂದರೆ ನಿಜ. ಸದರಿ ಸಿಲಿಂಡರ್ ಗಳು ನಮ್ಮ ಶಾಲೆಯಲ್ಲಿ ಇರತಕ್ಕ ಸಿಲಿಂಡರ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಪೋಲಿಸರು ಸದರಿ ಸಿಲಿಂಡರ್ ಗಳನ್ನು ಆರೋಪಿತರ ವಿರುದ್ಧ ಉಪಯೋಗಿಸಿರುತ್ತಾರೆ ಎಂದರೆ ಸರಿಯಲ್ಲ. ಈ ಕೇಸಿನ ಬಗ್ಗೆ ನನಗೆ ಯಾವುದೇ ವಿಷಯ ಗೊತ್ತಿಲ್ಲ ಆದರೂ ಕೂಡಾ ನಮ್ಮ ಮೇಲಾಧಿಕಾರಿಯ ಮಾತು ಕೇಳಿ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

Sd/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.